    b. a Renewable Energy Museum at Bengaluru, as a national and international landmark for renewable-energy knowledge and public engagement; and

    c. a Green Bank dedicated to climate finance.

3. The Vice-Chairperson may —

a. Engage, through the KSPCB, up to three expert members to assist in technical matters relating to the work of the Task Force; and

b. Engage, through Environment Management & Policy Research Institute (EMPRI), on non-financial terms, one or more technical partners, institutions or knowledge partners of repute to manage research, consultations, seminars and conferences, and to facilitate the overall functioning of the Task Force.

4. The Task Force —

i. May, if necessary, constitute Net-Zero sectoral Sub-Committees, and may co-opt other Government Departments and members of such Sub-Committees as members of the Task Force;

ii. May develop an interactive website, through the KSPCB / EMPRI, to facilitate the exchange of information with and for the public;

iii. Shall sensitize key Government stakeholders, including district officials, on the Net-Zero and just-transition process, and may constitute district-wise Net-Zero Committees; and

iv. Shall study the latest progress, best practices and emerging models of development in the field of Net-Zero and climate action, in India and abroad.

All publications, studies, research, knowledge products and databases commissioned by the Task Force shall be the intellectual property of the State Government.

5. Administrative and Travel Provisions

- Secretarial, technical and administrative assistance, including accommodation, an e-vehicle, for the use of the Task Force shall be provided by the KSPCB, which shall anchor the Task Force.
- The Vice-Chairperson and the expert members may travel within the State and nationally in furtherance of the objectives of the Task Force, while any international travel shall be subject to prior approval by the Government.
- The Task Force shall have the authority to decide upon any residual or incidental matter pertaining to its internal procedures, administration and overall functioning that is not expressly provided for in this Order.

6. Timeframe and Expenditure

Timeframe — The Task Force shall endeavor to complete its mandate within a period of three (3) years from the date of this Order, and may be reconstituted or its term extended thereafter by Government as may be considered necessary.

Expenditure — The secretarial, administrative and other expenditure on the functioning of the Task Force shall be met from the funds of the KSPCB.

By order and in the name of the
Governor of Karnataka,

(ANJUM PARWEZ)
Additional Chief Secretary to Government,
Forest, Ecology & Environment Department

PR-241

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ ಗ್ರಾಮದ ಆರ್.ಡಿ ಪಾಟೀಲ ಸರ್ಕಾರಿ ಪ್ರೌಢಶಾಲೆಯನ್ನು (UDISE Code 29090202906) ಪದವಿ ಪೂರ್ವ ಕಾಲೇಜಾನ್ನಾಗಿ ಉನ್ನತೀಕರಿಸುವ ಬಗ್ಗೆ.

ಓದಲಾಗಿದೆ:- 1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ರವರ ಏಕ ಕಡತ ಪ್ರಸ್ತಾವನೆ ಸಂಖ್ಯೆ: SSK/AR/OTH/1/2026-JDP-2060767.
2. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರ ಪ್ರಸ್ತಾವನೆ
3. ಸರ್ಕಾರಿ ಆದೇಶ ಸಂಖ್ಯೆ: ಇಪಿ 64 ಎಂಪಿಇ 2024, ದಿನಾಂಕ:15.10.2025.ಮತ್ತು ತಿದ್ದುಪಡಿ ಆದೇಶ ಸಂಖ್ಯೆ: ಇಪಿ 64 ಎಂಪಿಇ 2024,(ಭಾದ-2) ದಿನಾಂಕ:29.05.2026 .

******

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಶಿಕ್ಷಣ ಮಂತ್ರಾಲಯ AWP-PAB ಅಡಿ ಅರ್ಹ ಸರ್ಕಾರಿ ಪ್ರೌಢ ಶಾಲೆಗಳನ್ನು ಹಿರಿಯ ಪ್ರೌಢ ಶಾಲೆಗಳನ್ನಾಗಿ ಉನ್ನತೀಕರಿಸಲು 2023-24 ನೇ ಸಾಲಿನಲ್ಲಿ **06**, 2024-2025ನೇ ಸಾಲಿನಲ್ಲಿ**13** ಹಾಗೂ 2025-2026 ನೇ ಸಾಲಿನಲ್ಲಿ **15** ಪ್ರೌಢ ಶಾಲೆಗಳು ಅನುಮೋದನೆಯಾಗಿರುತ್ತದೆ. ಹಾಗೂ ಇದರೊಂದಿಗೆ 2023-24 ಹಾಗೂ 2024-25 ನೇ ಸಾಲಿನಲ್ಲಿ ಅನುಮೋದನೆಯಾದ ಎಲ್ಲಾ 19 ಉನ್ನತೀಕರಿಸಿದ ಹಿರಿಯ ಪ್ರೌಢ ಶಾಲೆಗಳಿಗೆ ಅತಿಥಿ ಉಪನ್ಯಾಸಕರ ಸೇವೆ ಪಡೆಯಲು ಅನುದಾನ ಅನುಮೋದನೆಯಾಗಿರುತ್ತದೆ. ಪ್ರಸ್ತುತ ಪಿ ಎ ಬಿ ಯಿಂದ ಅನುಮೋದನೆಗೊಂಡ ಎಲ್ಲ ಶಾಲೆಗಳ ಸುತ್ತ ಮುತ್ತ ಇನ್ನಿತರ ಅನುದಾನಿತ, ಸರ್ಕಾರಿ ಹಾಗೂ ಖಾಸಗಿ ಪ್ರೌಢಶಾಲೆಗಳು ಇರುವುದರಿಂದ ಉತ್ತಮ ಗುಣಮಟ್ಟದ ಪಿ ಯು ಕಾಲೇಜುಗಳನ್ನು ಪ್ರಾರಂಭಿಸಿದಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.ಆದ್ದರಿಂದ ಒಟ್ಟು 34 ಕಾಲೇಜುಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಉನ್ನತೀಕರಿಸಲ್ಪಡುವ ಪದವಿ ಪೂರ್ವ ಕಾಲೇಜುಗಳ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಕಾರ್ಯಗಳು ಸುಗಮವಾಗಿ ನಡೆಯಲು ಮತ್ತು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಒದಗಿಸಲು, ಅವಶ್ಯ ಹುದ್ದೆಗಳ ಮಂಜೂರಾತಿ ಅತ್ಯಾವಶ್ಯಕವಾಗಿರುತ್ತದೆ. ಅಗತ್ಯ ಮಾನವ ಸಂಪನ್ಮೂಲ ಮಂಜೂರಾದಲ್ಲಿ ಸದರಿ ಪದವಿ ಪೂರ್ವ ಕಾಲೇಜುಗಳನ್ನು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ. ಉನ್ನತೀಕರಿಸಲ್ಪಡುವ ಪದವಿ ಪೂರ್ವ ಕಾಲೇಜುಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯ ಉದ್ದೇಶದಿಂದ ಉತ್ತಮ ಗುಣಮಟ್ಟದ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವುದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಪದವಿ ಪೂರ್ವ ಶಿಕ್ಷಣವನ್ನು ಸ್ಥಳೀಯ ಮಟ್ಟದಲ್ಲೇ ಪಡೆಯಲು ಅನುಕೂಲವಾಗುತ್ತದೆ. ಪ್ರೌಢ ಶಾಲೆಗಳು ಕಲಾ ವಿಭಾಗಕ್ಕೆ ಹಾಗೂ ವಿಜ್ಞಾನ ವಿಭಾಗಕ್ಕೆ ಉನ್ನತೀಕರಿಸಲು SSK PABಯಲ್ಲಿ ಅನುಮೋದನೆಯಾಗಿರುತ್ತದೆ. ಆದ್ದರಿಂದ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಒಟ್ಟು 34 ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಆದೇಶದಲ್ಲಿ 494 ಸರ್ಕಾರಿ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಿಸಲು ಅನುಮೋದನೆ ನೀಡಲಾಗಿರುತ್ತದೆ. ಕ್ರಮ ಸಂಖ್ಯೆ:160ರಲ್ಲಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ ಗ್ರಾಮದ ಆರ್.ಡಿ ಪಾಟೀಲ ಸರ್ಕಾರಿ ಶಾಲೆಯನ್ನು (UDISE Code 29090202906)8 ರಿಂದ 10ರವರೆಗೆ ಕರ್ನಾಟಕ ಪಬ್ಲಿಕ್ ಶಾಲೆಯನ್ನು ಉನ್ನತೀಕರಿಸಿ ಆದೇಶಿಸಲಾಗಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಸಮಗ್ರ ಶಿಕ್ಷಣ ಕರ್ನಾಟಕ ಇವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿನ 34 ಪ್ರೌಢ ಶಾಲೆಗಳನ್ನು ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸುವ ಪಟ್ಟಿಯಲ್ಲಿರುವ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ ಗ್ರಾಮದ ಆರ್.ಡಿ ಪಾಟೀಲ ಸರ್ಕಾರಿ ಪ್ರೌಢಶಾಲೆಯನ್ನು (UDISE Code 29090202906) ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅವಶ್ಯವಿರುವ ಭೋಧಕ ಮತ್ತು ಭೋಧಕೇತರ ಸಿಬ್ಬಂದಿಗಳನ್ನು ಮರುಹೊಂದಣಿಕೆ ಮಾಡುವ ಷರತ್ತಿಗೊಳಪಟ್ಟು ಪದವಿ ಪೂರ್ವ ಕಾಲೇಜಾನ್ನಾಗಿ ಉನ್ನತೀಕರಿಸಿ ಆದೇಶಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಇಪಿ 41 ಎಸ್ ಹೆಚ್ ಹೆಚ್ 2026, ಬೆಂಗಳೂರು, ದಿನಾಂಕ:06-06-2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ ಗ್ರಾಮದ ಆರ್.ಡಿ ಪಾಟೀಲ ಸರ್ಕಾರಿ ಪ್ರೌಢಶಾಲೆಯನ್ನು (UDISE Code 29090202906) ಪದವಿ ಪೂರ್ವ ಕಾಲೇಜಾನ್ನಾಗಿ ಉನ್ನತೀಕರಿಸಿ ಆದೇಶಿಸಿದೆ.

ಮುಂದುವರೆದು, ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ರವರು ಈ ಸಂಬಂಧ ಅವಶ್ಯವಿರುವ ಭೋಧಕ ಮತ್ತು ಭೋಧಕೇತರ ಸಿಬ್ಬಂದಿಗಳನ್ನು ಮರುಹೊಂದಣಿಕೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪದ್ಮಿನಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
(ಪದವಿ ಪೂರ್ವ ಶಿಕ್ಷಣ)

PR-242

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಅಳ್ಳೋಳ್ಳಿ ಗ್ರಾಮದಲ್ಲಿನ ಸರ್ಕಾರಿ ಪ್ರೌಢ ಶಾಲೆಯನ್ನು ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸುವ ಕುರಿತು.

ಓದಲಾಗಿದೆ:- :ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರ ಪತ್ರ ಸಂಖ್ಯೆ:2127118-DPUE-EST10OTH/103/2026-ESTTWO, ದಿನಾಂಕ:06.04.2026.

******

ಪ್ರಸ್ತಾವನೆ:

ಮೇಲೆ ಓದಲಾದ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರ ಪತ್ರದಲ್ಲಿ ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಅಳ್ಳೋಳ್ಳಿ ಗ್ರಾಮ ಮತ್ತು ವಾಡಿ ಪಟ್ಟಣದ ಈ ಎರಡು ಸರ್ಕಾರಿ ಪ್ರೌಢ ಶಾಲೆಗಳನ್ನು ಉನ್ನತೀಕರಿಸಿ ಹೊಸದಾಗಿ HEBA & PCMB ಸಂಯೋಜನೆಗಳೊಂದಿಗೆ ಸಂಯುಕ್ತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಸೂಕ್ತ ಆದೇಶ ಹೊರಡಿಸುವಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ನಿರ್ದೇಶಕರು,ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಸರ್ಕಾರಿ ಪ್ರೌಢ ಶಾಲೆ, ವಾಡಿ,, ಚಿತ್ತಾಪುರ ತಾಲ್ಲೂಕು, ಕಲಬುರಗಿ ಜಿಲ್ಲೆ ಈ ಶಾಲೆಯ 15 ಕಿ.ಮೀ ವ್ಯಾಪ್ತಿಯಲ್ಲಿ 02 ಪದವಿ ಪೂರ್ವ ಕಾಲೇಜುಗಳು ಇರುವುದರಿಂದ ಮತ್ತೊಂದು ಹೊಸ ಕಾಲೇಜನ್ನು ಪ್ರಾರಂಭಿಸಲು ಹಾಗೂ ಈ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ ಯಲ್ಲಿ ಕೇವಲ 35 ವಿದ್ಯಾರ್ಥಿಗಳು ಇರುವುದರಿಂದ ಈ ಪ್ರೌಢಶಾಲೆಯನ್ನು ಉನ್ನತೀಕರಿಸುವ ಬಗ್ಗೆ ಸೂಕ್ತ ಸ್ಪಷ್ಟೀಕರಣದೊಂದಿಗೆ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ.

ಮುಂದುವರೆದು, ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 430 ವೆಚ್ಚ-8 2025, ದಿನಾಂಕ:16.07.2025ರಲ್ಲಿನ ಷರತ್ತುಗಳನ್ನು ಪೂರೈಸಿರುವ ಸರ್ಕಾರಿ ಪ್ರೌಢ ಶಾಲೆ (29040400209) ಅಳ್ಳೋಳ್ಳಿ ಗ್ರಾಮ, ಚಿತ್ತಾಪುರ ತಾಲ್ಲೂಕು, ಕಲಬುರಗಿ ಜಿಲ್ಲೆ ಇದನ್ನು KKRDB ಅನುದಾನದಿಂದ ಮೂರು ವರ್ಷಗಳ ಕಾಲ ಬೋಧಕ ಮತ್ತು ಬೋಧಕೇತರ ವರ್ಗದವರ ಮತ್ತು Operational costs of running the colleges ಗೆ ಅವಕಾಶ ಕಲ್ಪಿಸುವ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟು PCMB, PCMCS, EBACS ಸಂಯೋಜನೆಗಳೊಂದಿಗೆ ಸಂಯುಕ್ತ ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಪಿ 73 ಎಸ್ ಹೆಚ್ ಹೆಚ್ 2026, ಬೆಂಗಳೂರು, ದಿನಾಂಕ: 01-06-2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರಿ ಪ್ರೌಢಶಾಲೆ, (29040400209) ಅಳ್ಳೋಳ್ಳಿ ಗ್ರಾಮ, ಚಿತ್ತಾಪುರ ತಾಲ್ಲೂಕು, ಕಲಬುರಗಿ ಜಿಲ್ಲೆ ಇದನ್ನು KKRDB ಅನುದಾನದಿಂದ ಮೂರು ವರ್ಷಗಳ ಕಾಲ ಬೋಧಕ ಮತ್ತು ಬೋಧಕೇತರ ವರ್ಗದವರ ಮತ್ತು Operational costs of running the colleges ಗೆ ಅವಕಾಶ ಕಲ್ಪಿಸುವ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟು **PCMB, PCMCS, EBACS** ಸಂಯೋಜನೆಗಳೊಂದಿಗೆ ಸಂಯುಕ್ತ ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸಲು ಆದೇಶಿಸಿದೆ.

ಕ್ರ. ಸಂ	ಜಿಲ್ಲೆ	ತಾಲ್ಲೂಕು	UDISE NUMBER	ಉನ್ನತೀಕರಿಸಲಾದ ಪ್ರೌಢಶಾಲೆಯ ಹೆಸರು
	ಕಲಬುರಗಿ	ಚಿತ್ತಾಪೂರ	29040400209	ಸರ್ಕಾರಿ ಪ್ರೌಢ ಶಾಲೆ, ಅಳ್ಳೋಳ್ಳಿ ಗ್ರಾಮ, ಚಿತ್ತಾಪುರ ತಾಲ್ಲೂಕು, ಕಲಬುರಗಿ ಜಿಲ್ಲೆ

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 326 ವೆಚ್ಚ-8/2026, ದಿನಾಂಕ:06.05.2026ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ಪದ್ಮಿನಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
(ಪದವಿ ಪೂರ್ವ ಶಿಕ್ಷಣ)

PR-243

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ವಾಡಿ ಪಟ್ಟಣದಲ್ಲಿನ ಸರ್ಕಾರಿ ಪ್ರೌಢ ಶಾಲೆಯನ್ನು ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸುವ ಕುರಿತು.

ಓದಲಾಗಿದೆ:- :ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರ ಪತ್ರ ಸಂಖ್ಯೆ:2127118-DPUE-EST10OTH/103/2026-ESTTWO, ದಿನಾಂಕ:06.04.2026.

******

ಪ್ರಸ್ತಾವನೆ:

ಮೇಲೆ ಓದಲಾದ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರ ಪತ್ರದಲ್ಲಿ ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಅಳ್ಳೊಳ್ಳಿ ಗ್ರಾಮ ಮತ್ತು ವಾಡಿ ಪಟ್ಟಣದ ಈ ಎರಡು ಸರ್ಕಾರಿ ಪ್ರೌಢ ಶಾಲೆಗಳನ್ನು ಉನ್ನತೀಕರಿಸಿ ಹೊಸದಾಗಿ HEBA & PCMB ಸಂಯೋಜನೆಗಳೊಂದಿಗೆ ಸಂಯುಕ್ತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಸೂಕ್ತ ಆದೇಶ ಹೊರಡಿಸುವಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ವಾಡಿ ಪಟ್ಟಣದಲ್ಲಿನ ಸರ್ಕಾರಿ ಪ್ರೌಢಶಾಲೆಯನ್ನು ಮೇಲ್ದರ್ಜೆಗೇರಿಸಿ ಸರಕಾರಿ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡಿದಲ್ಲಿ 06 ರಿಂದ 07 ಗ್ರಾಮಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. 2025-26ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಯಲ್ಲಿ ಉತ್ತಮ ಫಲಿತಾಂಶ ಬಂದಿರುವುದರಿಂದ ಈ ವ್ಯಾಪ್ತಿಯ ಎಲ್ಲಾ ಪ್ರೌಢಶಾಲೆಗಳ ವಿದ್ಯಾರ್ಥಿಗಳ ಪೈಕಿ ಕೆಲವು ವಿದ್ಯಾರ್ಥಿಗಳಿಗೆ ಅವಕಾಶ ಸಿಕ್ಕಂತಾಗುತ್ತದೆ. ಅಲ್ಲದೇ ಸದರಿ ಪಟ್ಟಣದ ಹತ್ತಿರದ ಗ್ರಾಮಗಳ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ಅವರನ್ನು ಕಾಲೇಜಿನ ವ್ಯಾಸಂಗದಿಂದ ಹೊರಗುಳಿಯದಂತೆ ತಡೆಯಲು ಸದರಿ ಪ್ರೌಢ ಶಾಲೆಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸುವಂತೆ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರು ಕೋರಿರುತ್ತಾರೆ.

ಮುಂದುವರೆದು, ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಅನುಮೋದನೆ ನೀಡಿರುವ ಹುದ್ದೆಗಳಲ್ಲಿಯೇ ಮರು ಹೊಂದಾಣಿಕೆ ಮಾಡಿ ಸರ್ಕಾರಿ ಪ್ರೌಢ ಶಾಲೆ (29040411845) ವಾಡಿ ಪಟ್ಟಣ, ಚಿತ್ತಾಪುರ ತಾಲ್ಲೂಕು, ಕಲಬುರಗಿ ಜಿಲ್ಲೆ ಇದನ್ನು KKRDB ಅನುದಾನದಿಂದ ಮೂರು ವರ್ಷಗಳ ಕಾಲ ಬೋಧಕ ಮತ್ತು ಬೋಧಕೇತರ ವರ್ಗದವರ ವೇತನ ವೆಚ್ಚ ಮತ್ತು Operational costs of running the colleges ಗೆ ಅವಕಾಶ ಕಲ್ಪಿಸುವ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟು PCMB, PCMCS, EBACS ಸಂಯೋಜನೆಗಳೊಂದಿಗೆ ಸಂಯುಕ್ತ ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಪಿ 73 ಎಸ್ ಹೆಚ್ ಹೆಚ್ 2026, ಬೆಂಗಳೂರು, ದಿನಾಂಕ: 02-06-2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರಿ ಪ್ರೌಢಶಾಲೆ, (29040411845) ವಾಡಿ ಪಟ್ಟಣ, ಚಿತ್ತಾಪುರ ತಾಲ್ಲೂಕು, ಕಲಬುರಗಿ ಜಿಲ್ಲೆ ಇದನ್ನು KKRDB ಅನುದಾನದಿಂದ ಮೂರು ವರ್ಷಗಳ ಕಾಲ ಬೋಧಕ ಮತ್ತು ಬೋಧಕೇತರ ವರ್ಗದವರ ವೇತನ ವೆಚ್ಚ ಮತ್ತು Operational costs of running the colleges ಗೆ ಅವಕಾಶ ಕಲ್ಪಿಸುವ ಷರತ್ತು ಮತ್ತು

ನಿಬಂಧನೆಗೆ ಒಳಪಟ್ಟು **PCMB, PCMCS, EBACS** ಸಂಯೋಜನೆಗಳೊಂದಿಗೆ ಸಂಯುಕ್ತ ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸಲು ಆದೇಶಿಸಿದೆ.

ಕ್ರ. ಸಂ	ಜಿಲ್ಲೆ	ತಾಲ್ಲೂಕು	UDISE NUMBER	ಉನ್ನತೀಕರಿಸಲಾದ ಪ್ರೌಢಶಾಲೆಯ ಹೆಸರು
	ಕಲಬುರಗಿ	ಚಿತ್ತಾಪೂರ	29040411845	ಸರ್ಕಾರಿ ಪ್ರೌಢ ಶಾಲೆ, ವಾಡಿ ಪಟ್ಟಣ, ಚಿತ್ತಾಪುರ ತಾಲ್ಲೂಕು, ಕಲಬುರಗಿ ಜಿಲ್ಲೆ

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 326 ವೆಚ್ಚ-8/2026, ದಿನಾಂಕ:30.05.2026ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪದ್ಮಿನಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
(ಪದವಿ ಪೂರ್ವ ಶಿಕ್ಷಣ)

PR-244

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಸರ್ಕಾರಿ ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸಲಾಗಿರುವ (ಸರ್ಕಾರಿ ಕನ್ಯಾ ಪ್ರೌಢಶಾಲೆ) ಸೇಡಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಸೇಡಂನ ಕಾಲೇಜಿಗೆ ಹಾಲಿ ಇರುವ EBACS ಸಂಯೋಜನೆಯ ಜೊತೆಗೆ PCMB ಮತ್ತು ಕಲಾ ಸಂಯೋಜನೆಗಳನ್ನು (Arts streams) ಪ್ರಾರಂಭಿಸಲು ಅನುಮತಿ ನೀಡುವ ಕುರಿತು.

ಓದಲಾಗಿದೆ: -
1. ಸರಕಾರದ ಆದೇಶಸಂಖ್ಯೆ: ಇಪಿ 96 ಎಸ್ ಹೆಚ್ 2025 ಬೆಂಗಳೂರು, ದಿನಾಂಕ:13.03.2026.
2. ನಿರ್ದೇಶನಾಲಯ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರ ಏಕ ಕಡತ ಸಂಖ್ಯೆ: DPUE-EST20KK(OTHR)/15/2026-ADMN-DEPARTMENT OF PRE UNIVERSITY EDUCATION
3. ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯವರ ಪತ್ರ ಸಂ:ಕ.ಕ.ಪ್ರ.ಅ.ಮಂ/ ಯೋಶಾ/ ಕಲಬುರಗಿ/ಮೈಕ್ರೋ/06/2025-2026/(E-319642)/2059

******

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1) ರ ಆದೇಶದಲ್ಲಿ ಸೇಡಂ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸೇಡಂ ನಗರದ ಸರಕಾರಿ ಪ್ರೌಢ ಶಾಲೆ ಸೇಡಂ ಅನ್ನು ಉನ್ನತೀಕರಿಸಿ EBACS

ಸಂಯೋಜನೆಯೊಂದಿಗೆ ಸರಕಾರಿ ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರ ಕಡತದಲ್ಲಿ ಸೇಡಂ ವಿಧಾನ ಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕನ್ಯಾ ಪ್ರೌಢ ಶಾಲೆ ಸೇಡಂ ಇದನ್ನು ಪದವಿಪೂರ್ವ ಕಾಲೇಜನ್ನಾಗಿ ಉನ್ನತ್ತೀಕರಿಸಿ EBACS ಸಂಯೋಜನೆಯ ಜೊತೆಗೆ PCMB ಮತ್ತು ARTS ಸಂಯೋಜನೆಯನ್ನು ಪ್ರಾರಂಭಿಸಲು ಹಾಗೂ ಸದರಿ ಉನ್ನತೀಕರಿಸಿದ ಕಾಲೇಜಿನ ಮುಂದಿನ 03 ವರ್ಷಗಳ ಅತಿಥಿ ಉಪನ್ಯಾಸಕರ ವೇತನ ವೆಚ್ಚ ಮತ್ತು ಮೂಲಭೂತ ಸೌಕರ್ಯಗಳ ವೆಚ್ಚಕ್ಕಾಗಿ ಮುಂದಿನ 03 ವರ್ಷದ ಸೇಡಂ ವಿಧಾನಸಭಾ ಮತಕ್ಷೇತ್ರದ ಮೈಕ್ರೋ ಕ್ರಿಯಾ ಯೋಜನೆಯಡಿ ಅನುದಾನ ಕಾಯ್ದಿರಿಸಲಾಗುವುದು ಎಂದು ಉಲ್ಲೇಖಿತ(2)ರ ಪತ್ರದಲ್ಲಿ, ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯವರು ತಿಳಿಸಿರುವ ಹಿನ್ನೆಲೆಯಲ್ಲಿ, ಹೆಚ್ಚುವರಿಯಾಗಿ PCMB ಮತ್ತು ARTS ಸಂಯೋಜನೆಯನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಏಕ ಕಡತದ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಕಾಲೇಜಿಗೆ ಮೂರು ವರ್ಷಗಳ ಅವಧಿಗೆ ಸಂಬಂಧಿತ ವೆಚ್ಚವನ್ನು ಕೆಕೆಆರ್‌ಡಿಬಿ (KKRDB) ವತಿಯಿಂದ ಭರಿಸಲಾಗುತ್ತಿರುವ ಹಿನ್ನಲೆಯಲ್ಲಿ, ಸೇಡಂ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿರುವ ಸೇಡಂ ನಗರದ ಸರ್ಕಾರಿ ಕನ್ಯಾ ಪ್ರೌಡಶಾಲೆ ಸೇಡಂ ಅನ್ನು ಉನ್ನತೀಕರಿಸಿದ ಪದವಿ ಪೂರ್ವ ಕಾಲೇಜಿನಲ್ಲಿ EBACS (ವಾಣಿಜ್ಯ) ಸಂಯೋಜನೆಯ ಜೊತೆಗೆ PCMB ಮತ್ತು ARTS ಸಂಯೋಜನೆಯನ್ನು ಪ್ರಾರಂಭಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಪಿ 152 ಎಸ್ ಹೆಚ್ ಹೆಚ್ 2026, ಬೆಂಗಳೂರು,
ದಿನಾಂಕ: 16-07-2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, KKRDB ಅನುದಾನದಿಂದ ಮೂರು ವರ್ಷಗಳ ಅವಧಿಗೆ ಸಂಬಂಧಿತ ವೆಚ್ಚವನ್ನು ಭರಿಸುವ ಷರತ್ತಿಗೊಳ್ಳಪಟ್ಟು ಸರಕಾರದ ಆದೇಶ ಸಂಖ್ಯೆ: ಇಪಿ 96 ಎಸ್ ಹೆಚ್ 2025 ಬೆಂಗಳೂರು, ದಿನಾಂಕ:13.03.2026 ರ ಮೂಲಕ **EBACS** ಸಂಯೋಜನೆ ಗಳೊಂದಿಗೆ ಉನ್ನತೀಕರಿಸಲಾಗಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು, (29040909249) ಸೇಡಂ ನಗರ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ ಇಲ್ಲಿಗೆ ಹಾಲಿ ಮಂಜೂರಾಗಿರುವ **EBACS** ಸಂಯೋಜನೆ ಜೊತೆಗೆ PCMB ಮತ್ತು ARTS ಸಂಯೋಜನೆಗಳನ್ನು ಪ್ರಾರಂಬಿಸಲು ಅನುಮತಿ ನೀಡಿ ಆದೇಶಿಸಿದೆ.

ಕ್ರ. ಸಂ	ಜಿಲ್ಲೆ	ತಾಲ್ಲೂಕು	UDISE NUMBER	ಪದವಿಪೂರ್ವ ಕಾಲೇಜಿನ ವಿವರ
1	ಕಲಬುರಗಿ	ಸೇಡಂ	29040909249	ಸರ್ಕಾರಿ ಪದವಿ ಪೂರ್ವ ಕಾಲೇಜು, ಸೇಡಂ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ

ಮುಂದುವೆರೆದು, ಮೂರು ವರ್ಷಗಳ ನಂತರ ಅಗತ್ಯ ಪ್ರಮಾಣದ ವಿದ್ಯಾರ್ಥಿಗಳ ಸಂಖ್ಯೆ ಲಭ್ಯವಿಲ್ಲದಿದ್ದರೆ, ಆಡಳಿತ ಇಲಾಖೆಯು ಮತ್ತೊಮ್ಮೆ ಪರಿಶೀಲಿಸಿ, ಸದರಿ ಉನ್ನತೀಕರಿಸಿದ ಪದವಿ ಪೂರ್ವ ಕಾಲೇಜನ್ನು ಮುಂದುವರಿಸಬೇಕೇ? ಅಥವಾ ಬೇಡವೇ? ಎಂಬ ಬಗ್ಗೆ ಅಭಿಪ್ರಾಯದೊಂದಿಗೆ ನಿದೇ ಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 485 ವೆಚ್ಚ-8/2026, ದಿನಾಂಕ:14.07.2026ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪ್ರಕಾಶ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
(ಪದವಿ ಪೂರ್ವ ಶಿಕ್ಷಣ)

PR-245

ಕರ್ನಾಟಕ ಸರ್ಕಾರ ನಡವಳಿಗಳು

ವಿಷಯ: ರಾಜ್ಯದಲ್ಲಿನ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದಿರುವ ಪಟ್ಟಣಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಕೆ)(10) (ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರನ್ವಯ ತಯಾರಿಸಿರುವ GIS ಆಧಾರಿತ Road Network Grid Plan ಗೆ ಸದರಿ ಕಾಯ್ದೆಯ ಕಲಂ 13(1) ರಡಿಯಲ್ಲಿ ಸರ್ಕಾರದಿಂದ ತಾತ್ಕಾಲಿಕ ಅನುಮೋದನೆ ನೀಡುವ ಕುರಿತು.

ಉಲ್ಲೇಖ: 1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳ ದಿನಾಂಕ:21-11-2025, ದಿನಾಂಕ:13-01-2026 ಮತ್ತು ದಿನಾಂಕ: 22-04-2026.

2. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಏಕ ಕಡತ ಪ್ರಸ್ತಾವನೆ ಸಂಖ್ಯೆ: DTCP-TECHO-MP-10-2026 (2216364) ದಿನಾಂಕ: 02-07-2026.

****

ಪ್ರಸ್ತಾವನೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಎ) ರನ್ವಯ ರಾಜ್ಯದ ಪಟ್ಟಣಗಳಲ್ಲಿ ಸ್ಥಳೀಯ ಯೋಜನಾ ಪ್ರದೇಶಗಳನ್ನು ಘೋಷಿಸಿ ಮಹಾಯೋಜನೆಗಳನ್ನು ಸಿದ್ಧಪಡಿಸುವ ಕಾರ್ಯವು ಜಾರಿಯಲ್ಲಿದೆ. ಆದಾಗ್ಯೂ ರಾಜ್ಯದಲ್ಲಿನ

ಕೆಲವು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಇನ್ನೂ ಸ್ಥಳೀಯ ಯೋಜನಾ ಪ್ರದೇಶಗಳನ್ನು ಅನುಬಂಧ-1ರಂತೆ ಘೋಷಿಸಬೇಕಾಗಿದ್ದು ಆಡಳಿತಾತ್ಮಕ, ತಾಂತ್ರಿಕ ಹಾಗೂ ಎಲ್ಲೆಗಳ ನಿರ್ಧಾರಕ್ಕೆ ಸಂಬಂಧಿಸಿದ ಕಾರಣಗಳಿಂದ ಈ ಪ್ರಕ್ರಿಯೆಗೆ ಹೆಚ್ಚಿನ ಕಾಲಾವಕಾಶ ಅಗತ್ಯವಾಗಿರುತ್ತದೆ.

ಇಂತಹ ಪ್ರದೇಶಗಳಲ್ಲಿ ಯೋಜಿತ ಅಭಿವೃದ್ಧಿ ಹಾಗೂ ಭವಿಷ್ಯದ ನಗರ ವಿಸ್ತರಣೆಯನ್ನು ಸಮರ್ಪಕವಾಗಿ ನಿಯಂತ್ರಿಸಲು ಪ್ರಮುಖ ರಸ್ತೆ ಜಾಲರಿಂಗ್ / ವರ್ತುಲ ರಸ್ತೆ, ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ಸಂಪರ್ಕ ರಸ್ತೆಗಳನ್ನು ಪ್ರಸ್ತಾಪಿಸಿ ಸಂರಕ್ಷಿಸುವುದು ಅತ್ಯಾಗತ್ಯವಾಗಿದೆ, ಇಲ್ಲವಾದಲ್ಲಿ ಅನಿಯಂತ್ರಿತ ಅಭಿವೃದ್ಧಿಯಿಂದ ಭವಿಷ್ಯದಲ್ಲಿ ರಸ್ತೆ ನಿರ್ಮಾಣ, ವಿಸ್ತರಣೆ ಹಾಗೂ ಸಾರ್ವಜನಿಕ ಮೂಲಸೌಕರ್ಯ ಅಭಿವೃದ್ಧಿಗೆ ಅಡಚಣೆ ಉಂಟಾಗಿ ಸರ್ಕಾರಕ್ಕೆ ಹೆಚ್ಚಿನ ಭೂಸ್ವಾಧೀನ ವೆಚ್ಚ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯಾಗುವ ಸಾಧ್ಯತೆ ಇರುತ್ತದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4 (ಕೆ) (10) (ಬಿ) ರನ್ವಯ ಸ್ಥಳೀಯ ಯೋಜನಾ ಘೋಷಣೆಯಾಗದಿರುವ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿ ಹಾಗೂ ಅವುಗಳ ಸುತ್ತಮುತ್ತಲಿನ ಬೆಳವಣಿಗೆಯ ಪ್ರದೇಶಗಳನ್ನು ಒಳಗೊಂಡಂತೆ Settlement Extension Plan ಅಡಿಯಲ್ಲಿ ಜಿಐಎಸ್ (GIS) ಆಧಾರಿತ ರಸ್ತೆ ಜಾಲದ ಯೋಜನೆಯನ್ನು (Road Network Grid Plan) ಕೆಳಕಂಡ ಕಾಯ್ದೆಯ ಅವಕಾಶದಡಿ ಸಿದ್ಧಪಡಿಸಲಾಗಿದೆ.

Section 4-K(10)(b) of the Karnataka Town and Country Planning Act provides for preparation of Village or Settlement Extension Plan by the Director of Town and Country Planning.

> ***"Settlement Extension Plan means a plan prepared and approved by the Government for regulating the growth and expansion of a town or urban settlement in areas not covered by a Local Planning Area, broadly indicating the circulation pattern, including the road network grid system"***

ಈ ಯೋಜನೆಯಲ್ಲಿ ನಗರ ಸ್ಥಳೀಯ ಸಂಸ್ಥೆಯ ಎಲ್ಲೆಯ ಹೊರಭಾಗದಲ್ಲಿರುವ ಹಾಲಿ ರಸ್ತೆ ಸಂಪರ್ಕವನ್ನು ಪರಿಗಣಿಸಿಕೊಂಡು Road Network Grid Plan ನ್ನು ಸಮಗ್ರವಾಗಿ ರೂಪಿಸಲಾಗಿದೆ.

ಸದರಿ ಯೋಜನೆಯು ಮುಂದಿನ ದಿನಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಗೊಂಡು ಮಹಾಯೋಜನೆಯನ್ನು ಸಿದ್ಧಪಡಿಸುವವರೆಗೆ ಭೂ ಅಭಿವೃದ್ಧಿಗಳಿಗೆ ಅನುಮತಿಸುವಾಗ ಪ್ರಮುಖ ಮಾರ್ಗದರ್ಶಕ ದಾಖಲೆಯಾಗಿ ಬಳಸುವ ಉದ್ದೇಶ ಹೊಂದಿರುತ್ತದೆ.

ಆದ್ದರಿಂದ ಮೇಲ್ಕಂಡ ಉಲ್ಲೇಖ(1)ರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಗಳಲ್ಲಿ ಕೈಗೊಂಡ ನಿರ್ಣಯಗಳಂತೆ ಸ್ಥಳೀಯ ಯೋಜನಾ ಪ್ರದೇಶ ಘೊಷಣೆಯಾಗದಿರುವ 108 ಪಟ್ಟಣಗಳ ಪೈಕಿ ಮೊದಲ ಹಂತದಲ್ಲಿ 52 ನಗರ ಸ್ಥಳೀಯ ಸಂಸ್ಥೆಗಳಿಗೆ Road Network Grid Planನ್ನು ಸಿದ್ಧಪಡಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ (2) ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಏಕಕಡತದಲ್ಲಿ 52 ನಗರ ಸ್ಥಳೀಯ ಸಂಸ್ಥೆಗಳಿಗೆ Road Network Grid Planಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರಕಲಂ 13(1) ರನ್ವಯ ತಾತ್ಕಾಲಿಕ ಅನುಮೋದನೆ ನೀಡಲು ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ನಅಇ 25 ಟಿಟಿಪಿ 2026 (ಇ),</u>
<u>ಬೆಂಗಳೂರು, ದಿನಾಂಕ:18.07.2026</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದಿರುವ 108 ಪಟ್ಟಣಗಳ ಪೈಕಿ ಮೊದಲ ಹಂತದಲ್ಲಿ 52 ಪಟ್ಟಣಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4(ಕೆ)10)(ಬಿ) ರಡಿ ತಯಾರಿಸಿರುವ Road Network Grid Planಗಳಿಗೆ ಸದರಿ ಕಾಯ್ದೆಯ ಕಲಂ 13(1) ರನ್ವಯ ಈ ಕೆಳಕಂಡ ನಿರ್ದೇಶನಗಳೊಂದಿಗೆ ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಅನುಮೋದನೆ ನೀಡಿರುವ ಗುರುತಾಗಿ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

1. ದಿನಾಂಕ: 13-01-2026 ರಂದು ನಡೆದ ಸಭೆಯ ತೀರ್ಮಾನದನ್ವಯ, Road Network Grid ಯೋಜನೆಗೆ ತಗಲುವ ಖರ್ಚು-ವೆಚ್ಚಗಳನ್ನು ಕರ್ನಾಟಕ ನಗರ ಯೋಜನಾ ಮಂಡಳಿಯವತಿಯಿಂದ ಭರಿಸತಕ್ಕದ್ದು.

2. **ಅನುಬಂಧ-2**ರಲ್ಲಿನ ಪಟ್ಟಣಗಳಿಗೆ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಗೊಂಡು ,ಮಹಾಯೋಜನೆಯು ಅಂತಿಮವಾಗಿ ಅನುಮೋದನೆಯಾಗುವವರೆಗೆ, Road Network Grid Planಗಳಲ್ಲಿ ಕಾಯ್ದಿರಿಸಿರುವ ರಸ್ತೆಗಳನ್ನು ಅಭಿವೃದ್ಧಿ ಅನುಮೋದನೆಗಳಲ್ಲಿ ಮಾರ್ಗದರ್ಶಕ ದಾಖಲೆಯನ್ನಾಗಿ ಕಡ್ಡಾಯವಾಗಿ ಅನುಸರಿಸತಕ್ಕದ್ದು.

3. **ಅನುಬಂಧ-3** ರಲ್ಲಿನ ನಮೂದಿಸಲಾಗಿರುವ ಸಂಬಂಧಪಟ್ಟ ಸಹಾಯಕ ನಿರ್ದೇಶಕರ ಕಚೇರಿಗಳಲ್ಲಿ ಹಾಗೂ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಕಚೇರಿಗಳಲ್ಲಿ Road Network Grid Plan ಗಳನ್ನು ಸಾರ್ವಜನಿಕರ ವೀಕ್ಷಣೆಗಾಗಿ ಇರಿಸತಕ್ಕದ್ದು.

4. ಸಾರ್ವಜನಿಕರು 60 ದಿನಗಳ ನಿಗಧಿತ ಕಾಲಾವಿತಿಯೊಳಗೆ **ಅನುಬಂಧ-3** ರಲ್ಲಿನ ಸಂಬಂಧಪಟ್ಟ ನಗರ ಮತ್ತು ಗ್ರಾಮಾಂತರ ಸಹಾಯಕ ನಿರ್ದೇಶಕರ ಕಚೇರಿಗಳಿಗೆ ಸಲ್ಲಿಸುವ ಸಲಹೆ/ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಪರಿಗಣಿಸಬಹುದಾದ ಹಾಗೂ ತಿರಸ್ಕರಿಸಬಹುದಾದ ಸಲಹೆ/ಆಕ್ಷೇಪಣೆಗಳ ಕುರಿತು ಅಗತ್ಯ ಕ್ರಮಕೈಗೊಂಡು ಪ್ರಸ್ತಾವನೆಯನ್ನು ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸತಕ್ಕದ್ದು.

5. ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ

ಕಾಯ್ದೆ, 1961ರ ಕಲಂ 13(2) ರನ್ವಯ ಸರ್ಕಾರದ ಅಂತಿಮ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಹಿಸತಕ್ಕದ್ದು.

6. ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳು ಹಾಗೂ ಇತರೆ ಇಲಾಖೆಗಳು ವಸತಿ (ಬಡಾವಣೆ) ನಿರ್ಮಾಣ, ರಸ್ತೆನಿರ್ಮಾಣ, ಮತ್ತು ಇತರೆ ಅಭಿವೃದ್ಧಿಗಳಿಗೆ ಅನುಮತಿಸುವಾಗ ಹಾಗೂ ಇತರೆ ಮೂಲಸೌಕರ್ಯ ಯೋಜನೆಗಳನ್ನು ಮಂಜೂರು ಮಾಡುವಾಗ Road Network Grid Plan ಗಳನ್ನು ಕಡ್ಡಾಯವಾಗಿ ಪರಿಗಣಿಸತಕ್ಕದ್ದು.

7. ಮುಂದಿನ ದಿನಗಳಲ್ಲಿ **ಅನುಬಂಧ-2**ರಲ್ಲಿನ ಪಟ್ಟಣಗಳಿಗೆ ಸ್ಥಳೀಯ ಯೋಜನಾ ಪ್ರದೇಶ ಘೋಷಿಸಿ ಮಹಾಯೋಜನೆ ಸಿದ್ಧಪಡಿಸುವ ಸಂದರ್ಭದಲ್ಲಿ Road Network Grid Plan ಗಳನ್ನು ಮೂಲ ಆಧಾರ ದಾಖಲೆಯಾಗಿ ಪರಿಗಣಿಸಿ ಅಗತ್ಯ ತಿದ್ದುಪಡಿಗಳೊಂದಿಗೆ ಮಹಾಯೋಜನೆಯಲ್ಲಿ ಆಳವಡಿಸಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲತಾ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ
ನಗರಾಭಿವೃದ್ಧಿ ಇಲಾಖೆ

ಅನುಬಂಧ-1

ರಾಜ್ಯದಲ್ಲಿನ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿರುವ ನಗರ ಸ್ಥಳೀಯ ಸಂಸ್ಥೆಗಳ ವಿವರ

ಕ್ರ.ಸಂ	ಪ್ರಾಧಿಕಾರಗಳು	ಸಂಖ್ಯೆ	ನಗರ ಸ್ಥಳೀಯ ಸಂಸ್ಥೆಗಳು
01.	ಮೈಸೂರು ಅಭಿವೃದ್ಧಿ ಪ್ರಾಧಿಕಾರ	01	07
02.	ನಗರಾಭಿವೃದ್ಧಿ ಪ್ರಾಧಿಕಾರಗಳು	33	47
03.	ಯೋಜನಾ ಪ್ರಾಧಿಕಾರಗಳು	50	54
04.	ಪುರಸಭೆ ಯೋಜನಾ ಪ್ರಾಧಿಕಾರಗಳು	74	74
	ಒಟ್ಟು	**158**	**182**
05.	ಬಿ.ಎಂ.ಆರ್.ಡಿ.ಎ ವ್ಯಾಪ್ತಿ	13	23
	ಒಟ್ಟು	**171(158+13)**	**205(182+23)**
06.	ಒಟ್ಟು ನಗರ ಸ್ಥಳೀಯ ಸಂಸ್ಥೆಗಳು	**-**	**313**
07.	ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದೇ ಇರುವ ಪಟ್ಟಣಗಳು	-	**108** (313-205=108)

(ಲತಾ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ
ನಗರಾಭಿವೃದ್ಧಿ ಇಲಾಖೆ

ಅನುಬಂಧ-2

ಮೊದಲಹಂತದ Road Network Grid Plan ತಯಾರಿಸಲಾಗಿರುವ 52 ಪಟ್ಟಣಗಳವಿವರ

ಕ್ರ.ಸ	ಪಟ್ಟಣದ ಹೆಸರು	ತಾಲ್ಲೂಕು	ಜಿಲ್ಲೆ
1.	ಖಾನಾಪುರ	ಖಾನಾಪುರ	ಬೆಳಗಾವಿ
2.	ಹುಕ್ಕೇರಿ	ಹುಕ್ಕೇರಿ	
3.	ಅಥಣಿ	ಅಥಣಿ	
4.	ಐನಾಪುರ	ಕಾಗವಾಡ	
5.	ಅಣ್ಣಿಗೇರಿ	ಅಣ್ಣಿಗೇರಿ	ಧಾರವಾಡ
6.	ಕಲಘಟಗಿ	ಕಲಘಟಗಿ	
7.	ಅಳ್ನಾವರ	ಅಳ್ನಾವರ	
8.	ಹಿರೇಕೆರೂರು	ಹಿರೇಕೆರೂರು	ಹಾವೇರಿ
9.	ಬಂಕಾಪುರ	ಶಿಗ್ಗಾಂವ್	
10.	ಅಮೀನಗಡ	ಹುನಗುಂದ	ಬಾಗಲಕೋಟೆ
11.	ಹುಳಿಯಾರು	ಚಿಕ್ಕನಾಯಕನಹಳ್ಳಿ	ತುಮಕೂರು
12.	ಗುಬ್ಬಿ	ಗುಬ್ಬಿ	
13.	ಹೊಸನಗರ	ಹೊಸನಗರ	ಶಿವಮೊಗ್ಗ
14.	ಹೊಳೆಹೊನ್ನೂರು	ಭದ್ರಾವತಿ	
15.	ತೀರ್ಥಹಳ್ಳಿ	ತೀರ್ಥಹಳ್ಳಿ	
16.	ಮೊಳಕಾಲ್ಮೂರು	ಮೊಳಕಾಲ್ಮೂರು	ಚಿತ್ರದುರ್ಗ
17.	ನಾಯಕನಹಟ್ಟಿ	ಚಳ್ಳಕೆರೆ	
18.	ಗುಡಿಬಂಡೆ	ಗುಡಿಬಂಡೆ	ಚಿಕ್ಕಬಳ್ಳಾಪುರ
19.	ಶ್ರೀನಿವಾಸಪುರ	ಶ್ರೀನಿವಾಸಪುರ	ಕೋಲಾರ
20.	ಯಡ್ರಾಮಿ	ಜೇವರಗಿ	ಕಲಬುರಗಿ
21.	ಜೇವರಗಿ		
22.	ಚಿಂಚೋಳಿ	ಚಿಂಚೋಳಿ	
23.	ಕಾಳಗಿ	ಕಾಳಗಿ	
24.	ಕಮಲಾಪುರ	ಕಮಲಾಪುರ	
25.	ಕೊಟ್ಟೂರು	ಕೊಟ್ಟೂರು	ವಿಜಯನಗರ
26.	ಹಗರಿಬೊಮ್ಮನಹಳ್ಳಿ	ಹಗರಿಬೊಮ್ಮನಹಳ್ಳಿ	
27.	ಹೂವಿನಹಡಗಲಿ	ಹಡಗಲಿ	
28.	ಕನಕಗಿರಿ	ಕನಕಗಿರಿ	ಕೊಪ್ಪಳ
29.	ಕುಕನೂರು	ಕುಕನೂರು	
30.	ಕುಷ್ಟಗಿ	ಕುಷ್ಟಗಿ	
31.	ದೇವದುರ್ಗ	ದೇವದುರ್ಗ	ರಾಯಚೂರು
32.	ಹಟ್ಟಿ	ಲಿಂಗಸೂಗೂರು	
33.	ಮುದಗಲ್		

34.	ಕವಿತಾಳ	ಸಿರಿವರ	
35.	ತುರುವಿಹಾಳ	ಸಿಂಧನೂರು	
36.	ಬಳಗಾನೂರ		
37.	ಹಳ್ಳಿಖೇಡ್	ಹುಮನಾಬಾದ್	ಬೀದರ್
38.	ಕೆಂಭಾವಿ	ಶೋರಾಪುರ	ಯಾದಗಿರಿ
39.	ಹುಣಸಗಿ	ಹುಣಸಗಿ	
40.	ಬೆಳ್ಳೂರು	ನಾಗಮಂಗಲ	ಮಂಡ್ಯ
41.	ನಾಗಮಂಗಲ		
42.	ಪಾಂಡವಪುರ	ಪಾಂಡವಪುರ	
43.	ಕೃಷ್ಣರಾಜಪೇಟೆ	ಕೃಷ್ಣರಾಜಪೇಟೆ	
44.	ಹನೂರು	ಹನೂರು	ಚಾಮರಾಜನಗರ
45.	ಯಳಂದೂರು	ಯಳಂದೂರು	
46.	ಮೂಡಿಗೆರೆ	ಮೂಡಿಗೆರೆ	ಚಿಕ್ಕಮಗಳೂರು
47.	ಕಡಬಾ	ಕಡಬಾ	ದಕ್ಷಿಣಕನ್ನಡ
48.	ಕಿನ್ನಿಗೋಳಿ	ಮುಲ್ಕಿ	
49.	ಆಲೂರು	ಆಲೂರು	ಹಾಸನ
50.	ಬನ್ನೂರು	ಟಿ. ನರಸೀಪುರ	ಮೈಸೂರು
51.	ಹೆಚ್. ಡಿ ಕೋಟೆ	ಹೆಗ್ಗಡದೇವನಕೋಟೆ	
52.	ಸರಗೂರು	ಸರಗೂರು	

(ಲತಾ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ
ನಗರಾಭಿವೃದ್ಧಿ ಇಲಾಖೆ

ಅನುಬಂಧ-3

Road Network Grid Plan ಗೆ ಸಂಬಂಧಿಸಿದಂತೆ ಸಲಹೆ/ ಆಕ್ಷೇಪಣೆಯನ್ನು ಸಲ್ಲಿಸಬೇಕಾದ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿಗಳ ವಿವರ

ಕ್ರ.ಸ	ಪಟ್ಟಣದ ಹೆಸರು	ತಾಲ್ಲೂಕು	ಜಿಲ್ಲೆ	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿ
1	ಖಾನಾಪುರ	ಖಾನಾಪುರ	ಬೆಳಗಾವಿ	ಸಹಾಯಕ ನಿರ್ದೇಶಕರ ಕಚೇರಿ, ಬೆಳಗಾವಿ

2	ಹುಕ್ಕೇರಿ	ಹುಕ್ಕೇರಿ		ಸಹಾಯಕ ನಿರ್ದೇಶಕರ ಕಚೇರಿ,ನಿಪ್ಪಾಣಿ
3	ಅಥಣಿ	ಅಥಣಿ		
4	ಐನಾಪುರ	ಕಾಗವಾಡ		
5	ಅಣ್ಣಿಗೇರಿ	ಅಣ್ಣಿಗೇರಿ	ಧಾರವಾಡ	ಸಹಾಯಕ ನಿರ್ದೇಶಕರ ಕಚೇರಿ, ಧಾರವಾಡ
6	ಕಲಘಟಗಿ	ಕಲಘಟಗಿ		
7	ಅಳ್ನಾವರ	ಅಳ್ನಾವರ		
8	ಹಿರೇಕೆರೂರು	ಹಿರೇಕೆರೂರು	ಹಾವೇರಿ	ಸಹಾಯಕ ನಿರ್ದೇಶಕರ ಕಚೇರಿ, ಹಾವೇರಿ
9	ಬಂಕಾಪುರ	ಶಿಗ್ಗಾಂವ್		
10	ಅಮೀನಗಡ	ಹುನಗುಂದ	ಬಾಗಲಕೋಟೆ	ಸಹಾಯಕ ನಿರ್ದೇಶಕರ ಕಚೇರಿ, ಬಾಗಲಕೋಟೆ
11	ಹುಳಿಯಾರು	ಚಿಕ್ಕನಾಯಕನಹಳ್ಳಿ	ತುಮಕೂರು	ಸಹಾಯಕ ನಿರ್ದೇಶಕರ ಕಚೇರಿ, ತುಮಕೂರು
12	ಗುಬ್ಬಿ	ಗುಬ್ಬಿ		
13	ಹೊಸನಗರ	ಹೊಸನಗರ	ಶಿವಮೊಗ್ಗ	ಸಹಾಯಕ ನಿರ್ದೇಶಕರ ಕಚೇರಿ, ಶಿವಮೊಗ್ಗ
14	ಹೊಳೆಹೊನ್ನೂರು	ಭದ್ರಾವತಿ		
15	ತೀರ್ಥಹಳ್ಳಿ	ತೀರ್ಥಹಳ್ಳಿ		
16	ಮೊಳಕಾಲ್ಮೂರು	ಮೊಳಕಾಲ್ಮೂರು	ಚಿತ್ರದುರ್ಗ	ಸಹಾಯಕ ನಿರ್ದೇಶಕರ ಕಚೇರಿ, ಚಿತ್ರದುರ್ಗ
17	ನಾಯಕನಹಟ್ಟಿ	ಚಳ್ಳಕೆರೆ		
18	ಗುಡಿಬಂಡೆ	ಗುಡಿಬಂಡೆ	ಚಿಕ್ಕಬಳ್ಳಾಪುರ	ಸಹಾಯಕ ನಿರ್ದೇಶಕರ ಕಚೇರಿ, ಚಿಕ್ಕಬಳ್ಳಾಪುರ
19	ಶ್ರೀನಿವಾಸಪುರ	ಶ್ರೀನಿವಾಸಪುರ	ಕೋಲಾರ	ಸಹಾಯಕ ನಿರ್ದೇಶಕರ ಕಚೇರಿ, ಕೋಲಾರ
20	ಯಡ್ರಾಮಿ	ಜೇವರಗಿ	ಕಲಬುರಗಿ	ಸಹಾಯಕ ನಿರ್ದೇಶಕರ ಕಚೇರಿ, ಕಲಬುರಗಿ
21	ಜೇವರಗಿ			
22	ಚಿಂಚೋಳಿ	ಚಿಂಚೋಳಿ		
23	ಕಾಳಗಿ	ಕಾಳಗಿ		
24	ಕಮಲಾಪುರ	ಕಮಲಾಪುರ		
25	ಕೊಟ್ಟೂರು	ಕೊಟ್ಟೂರು	ವಿಜಯನಗರ	ಸಹಾಯಕ ನಿರ್ದೇಶಕರ ಕಚೇರಿ, ವಿಜಯನಗರ
26	ಹಗರಿಬೊಮ್ಮನಹಳ್ಳಿ	ಹಗರಿಬೊಮ್ಮನಹಳ್ಳಿ		
27	ಹೂವಿನಹಡಗಲಿ	ಹಡಗಲಿ		
28	ಕನಕಗಿರಿ	ಕನಕಗಿರಿ	ಕೊಪ್ಪಳ	ಸಹಾಯಕ ನಿರ್ದೇಶಕರ ಕಚೇರಿ, ಕೊಪ್ಪಳ
29	ಕುಕನೂರು	ಕುಕನೂರು		
30	ಕುಷ್ಟಗಿ	ಕುಷ್ಟಗಿ		

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

31	ದೇವದುರ್ಗ	ದೇವದುರ್ಗ	ರಾಯಚೂರು	ಸಹಾಯಕ ನಿರ್ದೇಶಕರ ಕಚೇರಿ, ರಾಯಚೂರು
32	ಹಟ್ಟಿ	ಲಿಂಗಸೂಗೂರು	ರಾಯಚೂರು	ಸಹಾಯಕ ನಿರ್ದೇಶಕರ ಕಚೇರಿ, ರಾಯಚೂರು
33	ಮುದಗಲ್			
34	ಕವಿತಾಳ	ಸಿರಿವರ		
35	ತುರುವಿಹಾಳ	ಸಿಂಧನೂರು		
36	ಬಳಗಾನೂರ			
37	ಹಳ್ಳಿಖೇಡ್	ಹುಮನಾಬಾದ್	ಬೀದರ್	ಸಹಾಯಕ ನಿರ್ದೇಶಕರ ಕಚೇರಿ, ಬೀದರ್
38	ಕೆಂಭಾವಿ	ಶೋರಾಪುರ	ಯಾದಗಿರಿ	ಸಹಾಯಕ ನಿರ್ದೇಶಕರ ಕಚೇರಿ, ಯಾದಗಿರಿ
39	ಹುಣಸಗಿ	ಹುಣಸಗಿ		
40	ಬೆಳ್ಳೂರು	ನಾಗಮಂಗಲ	ಮಂಡ್ಯ	ಸಹಾಯಕ ನಿರ್ದೇಶಕರ ಕಚೇರಿ, ಮಂಡ್ಯ
41	ನಾಗಮಂಗಲ			ಸಹಾಯಕ ನಿರ್ದೇಶಕರ ಕಚೇರಿ, ಮಂಡ್ಯ
42	ಪಾಂಡವಪುರ	ಪಾಂಡವಪುರ		
43	ಕೃಷ್ಣರಾಜಪೇಟೆ	ಕೃಷ್ಣರಾಜಪೇಟೆ		
44	ಹನೂರು	ಹನೂರು	ಚಾಮರಾಜನಗರ	ಸಹಾಯಕ ನಿರ್ದೇಶಕರ ಕಚೇರಿ, ಚಾಮರಾಜನಗರ
45	ಯಳಂದೂರು	ಯಳಂದೂರು		
46	ಮೂಡಿಗೆರೆ	ಮೂಡಿಗೆರೆ	ಚಿಕ್ಕಮಗಳೂರು	ಸಹಾಯಕ ನಿರ್ದೇಶಕರ ಕಚೇರಿ, ಚಿಕ್ಕಮಗಳೂರು
47	ಕಡಬಾ	ಕಡಬಾ	ದಕ್ಷಿಣಕನ್ನಡ	ಸಹಾಯಕ ನಿರ್ದೇಶಕರ ಕಚೇರಿ, ದಕ್ಷಿಣಕನ್ನಡ
48	ಕಿನ್ನಿಗೋಳಿ	ಮುಲ್ಕಿ		
49	ಆಲೂರು	ಆಲೂರು	ಹಾಸನ	ಸಹಾಯಕ ನಿರ್ದೇಶಕರ ಕಚೇರಿ, ಹಾಸನ
50	ಬನ್ನೂರು	ಟಿ. ನರಸೀಪುರ	ಮೈಸೂರು	ಸಹಾಯಕ ನಿರ್ದೇಶಕರ ಕಚೇರಿ, ಮೈಸೂರು
51	ಹೆಚ್ ಡಿ ಕೋಟೆ	ಹೆಗ್ಗಡದೇವನ ಕೋಟೆ		
52	ಸರಗೂರು	ಸರಗೂರು		

(ಲತಾ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ

PR-246

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

P S BASAVARAJU